ಏನವರ ಷರತ್ತು? ಅವರ ಮನಸ್ಸು ಕೌತುಕದಿಂದ ಕಾದಿತ್ತು. ಭಾವೇಶ್ ಹೇಳಿದರು, 'ನೀತಾಜೀ ಇಷ್ಟೇ ನನ್ನ ಷರತ್ತು. ನೀವು ನಿಮ್ಮ ತವರು ಮನೆಯಿಂದ ಒಂದು ರೂಪಾಯಿಯನ್ನೂ ತರಬಾರದು'. ತಮ್ಮದೇ ಪ್ರಯತ್ನದಿಂದ, ತಮ್ಮ ಕಾಲಿನ ಮೇಲೆ ತಾವು ನಿಲ್ಲುವ ಹೋರಾಟದ ಹಾದಿಗೆ ಇದು ಆಹ್ವಾನ ಎಂದು ನೀತಾ ಅವರಿಗೆ ಅರ್ಥವಾಯಿತು. ತನ್ನನ್ನು ಮಾತ್ರ ಭಾವೇಶ್ ಪಡೆಯಲು ಇಚ್ಛಿಸುತ್ತಾರೆ. ತನ್ನ ಕುಟುಂಬದ ಶ್ರೀಮಂತಿಕೆಯನ್ನು ಅವರು ಬಯಸುತ್ತಿಲ್ಲ ಎಂಬುದು ಮತ್ತಷ್ಟು ಸ್ಪಷ್ಟವಾಗಿತ್ತು. ನೀತಾ ಅವರ ಮಾತಿಗೆ ಒಪ್ಪಿದರು. ಆಗಲೇ ಭಾವೇಶ್ ಅವರ ಕಿವಿಗೆ ಅವರ ಪರಿವಾರದ ಸದಸ್ಯರ ದನಿ ಕೇಳಿಸಿತು. ಇಷ್ಟು ದಿನಗಳಲ್ಲಿ ಆ ಸ್ವರಗಳನ್ನು ಭಾವೇಶ್ ಗುರುತಿಸಬಲ್ಲವರಾಗಿದ್ದರು. ಅವರುಗಳು ಮಾತನಾಡುತ್ತಿದ್ದ ವಿಷಯ, ಮತ್ತು ಅವರುಗಳ ದನಿ ಹತ್ತಿರದಿಂದಲೇ ಕೇಳಿಸಿದ್ದು ನೋಡಿ, ಭಾವೇಶ್ ಅವರಿಗೆ ತಮ್ಮ ಮಾತುಗಳೆಲ್ಲೋ ಅವರಿಗೆ ಕೇಳಿಸಿಬಿಟ್ಟಿದೆ ಎಂದು ಅನಿಸಿತು. ಬಹುಶಃ ನೀತಾಗೂ ಹಾಗೆಯೇ ಅನಿಸಿರಬೇಕು. ಆದರೆ ಪರಿವಾರಕ್ಕಿನ್ನೂ ನೀತಾ ಅವರ ನಿರ್ಧಾರಗಳ ಅರಿವಿರಲಿಲ್ಲ.

ಆದರ್ಶದ ಮತ್ತಿನಲ್ಲಿ, ಒಂದು ಕ್ಷಣದ ದುಡುಕಿನಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಈ ವಯಸ್ಸಿನಲ್ಲಿ ಬಹಳ ಸುಲಭ. ಆದರೆ ನೀತಾ ಅವರದು ಬದುಕಿನುದ್ದಕ್ಕೂ ಜೊತೆ ನೀಡುವ ಭರವಸೆಯಾಗಿತ್ತು. ಸಂತಸದ ಸಂಘರ್ಷದ ಪಯಣಕ್ಕೆ ಸಂಗಾತಿಯಾಗುವ ಉದ್ದೇಶವಾಗಿತ್ತು. ಇದು ಆದರ್ಶತ್ಯಾಗಗಳ ಕತೆಯಾಗಿರಲಿಲ್ಲ. ಜೀವನಪ್ರೀತಿಯ ಕತೆಯಾಗಿತ್ತು.

ಭಾವೇಶ್ ಅವರೊಡನೆಯ ತಮ್ಮ ಜೀವನ ಪಯಣದಲ್ಲಿ ಅವರು ದಿಟವಾಗಿಯೂ ಖುಷಿಪಡಲಿದ್ದರು. ತಮ್ಮ ಗುರಿಯತ್ತ ದಿಟ್ಟ ಹೆಜ್ಜೆ ಹಾಕಲಿದ್ದರು. ಅವರು ಬೆಳೆಯಲು ಪೂರಕವಾಗಿ, ಅವರೊಡನೆ ತಾವೂ ಬೆಳೆಯುವ ಅಪೂರ್ವ ಜೋಡಿ ಇವರದಾಗಲಿತ್ತು. ಮೋಂಬತ್ತಿ ಕೊಳ್ಳಲುಬಂದ ಈ ಹುಡುಗಿ, ಹೃದಯವನ್ನು ಕಳೆದುಕೊಂಡಿದ್ದಳು. ಅವರ ಬದುಕನ್ನೇ ಬೆಳಗಲಿದ್ದಳು. ಭಾವೇಶ್ ಅವರ ಬದುಕಿನಲ್ಲಿ ದಿಟವಾದ ಸೂರ್ಯೋದಯವಾಗಲಿತ್ತು.

ಭಾವೇಶ್ ಅವರ ಇಲ್ಲಿಯವರೆಗಿನ ಜೀವನವೆಲ್ಲವೂ ಸಂಘರ್ಷವಾಗಿತ್ತು. ನೀತಾ ಅವರ ಈ ಭೆಟ್ಟಿಯನ್ನು ಅವರು 'ಮೈ ಜಿಂದಗೀ ಸೆ ಪೆಹಲೀ ಬಾರ್ ಮಿಲಾ' ಎಂದು ಬಣ್ಣಿಸುತ್ತಾರೆ. ಭಾವೇಶ್ ಅವರಿಗೆ ಬದುಕಿನೊಡನೆ ಪ್ರಥಮ ಭೆಟ್ಟಿಯಾದ ಪುಳಕ. ನೀತಾರ ಪ್ರವೇಶದಿಂದ ಅವರ ಬದುಕು ಇನ್ನಿಲ್ಲದ ಹಾಗೆ, ಗುರುತು ಸಿಗದ ಹಾಗೆ ಬದಲಾಗಲಿತ್ತು. ಶಿಶಿರ ಕಳೆದು, ವಸಂತದ ಹೊಸ ಚಿಗುರಿನ ಸಂಭ್ರಮ.

ಅಧ್ಯಾಯ 11

## ಒಲವೆ ನಮ್ಮ ಬದುಕು

ಮರುದಿನ ಬೆಳಗ್ಗೆ 10 ಗಂಟೆಯ ಸುಮಾರಿಗೆ, ಅದೇ ಚಿರಪರಿಚಿತ ಸ್ವರಗಳನ್ನು ಹತ್ತಿರದಲ್ಲಿ ಕೇಳಿ ಬಂದಾಗ, ಭಾವೇಶ್ ಅವರಿಗೆ ಅರಿವಾಯಿತು. ನೀತಾ ತಮ್ಮ ಪರಿವಾರದವರ ಎದುರು ನಿನ್ನೆ ಸಂಜೆಯ ಮಾತುಗಳನ್ನು ಮಂಡಿಸಿದ್ದಾರೆ. ಪರಿವಾರದ ಜನ, ಭಾವೇಶ್ ಅವರನ್ನು ಕಾರಲ್ಲಿ ಕೂಡಿಸಿಕೊಂಡು ಅವರು ತಂಗಿದ್ದ ಬಂಗಲೆಗೆ ಕರೆದುಕೊಂಡು ಹೋದರು. ಅಲ್ಲಿಯ ವಾತಾವರಣದಲ್ಲಿ ಉಲ್ಲಾಸವಿರಲಿಲ್ಲ. ಪರಿಸರದಲ್ಲಿ ಅದುಮಿಟ್ಟ ಆಕ್ರೋಶದ ಬಿಸಿ ಭಾವೇಶ್ ಅವರಿಗೆ ಅನುಭವಕ್ಕೆ ಬಂದಿತು. ಅಂಧ ವ್ಯಕ್ತಿಯ ಬಗ್ಗೆ ಕರುಣೆ, ಅನುಕಂಪದಿಂದ ಅವರು ಈ ಎರಡು ವಾರಗಳು ವ್ಯವಹರಿಸಿದ್ದರು. ಆದರೆ ನೀತಾ ಅವರ ಎದೆಯಲ್ಲಿ ಇದ್ದದ್ದು ಅನುಕಂಪವಲ್ಲ, ಪ್ರೀತಿ ಎಂದು ತಿಳಿದಾಗ ಅವರೆಲ್ಲರಿಗೂ ಆಘಾತವಾಗಿತ್ತು. ಅವರಲ್ಲಿ ಕೆಲವರು ಜೋರು ಧ್ವನಿಯಲ್ಲಿ ಹೇಳುತ್ತಿದ್ದರು 'ನಾವು ಇಲ್ಲಿಯವರೆಗೂ ಅಂಧ ವ್ಯಕ್ತಿ ವಿವಾಹ ಆಗುತ್ತಿರುವುದನ್ನು ನೋಡೇ ಇಲ್ಲ. ಎಲ್ಲಾ ಸರಿ ಇರುವ ನಮ್ಮ ಮನೆಯ ಮಗಳು ಕುರುಡನನ್ನು ಮದುವೆಯಾಗುವುದು ಅಂದರೇನು?' ಅವೇ ಮಾತುಗಳು ಪುನರಾವರ್ತನೆಗೊಳ್ಳುತ್ತಿದ್ದವು. ಭಾವೇಶ್ ಅವರ ಮನಸ್ಸಿನಲ್ಲಿ ಕೋಲಾಹಲ. 'ಅಂಧ ವ್ಯಕ್ತಿಗಳು ಮದುವೆ ಆಗಬಾರದು' ಎಂಬ ಈ ಶಾಸನವಾದರೂ ಯಾವುದು? ಕುರುಡರ ಮದುವೆ ನಿನ್ನೆ ಮೊನ್ನೆಯದೇನು? ಇವರುಗಳು ಮಹಾಭಾರತ ಓದಿಲ್ಲವೆ? ಧೃತರಾಷ್ಟ್ರನನ್ನು ಕೈಹಿಡಿದ ಗಾಂಧಾರಿಯ ಕತೆ ತಿಳಿಯದೆ? ಆದರೆ ಅವರ ಹೃದಯದಿಂದ ಹೊರಟ ಮಾತು ಗಂಟಲಿಗೆ ಬಂದು ನಿಂತುಬಿಟ್ಟಿತು. ಭಾವೇಶ್ ಅವರು ಬೆಳೆದು ಬಂದ ಸಂಸ್ಕಾರ, ಈ ರೀತಿ ಹಿರಿಯರಿಗೆ ಮಾರುತ್ತರ ನೀಡಲು ಬಿಡಲಿಲ್ಲ. ಅಷ್ಟೆಲ್ಲ ಪ್ರತಿರೋಧದ ದನಿಗಳ ನಡುವೆ, ನೀತಾ ಅವರ ತಾಯಿಯೊಬ್ಬರೇ ಅವರ ಜೊತೆ ನಿಲ್ಲಲು ಸ್ವಲ್ಪವಾದರೂ ಪ್ರಯತ್ನಿಸುತ್ತಿದ್ದದ್ದು ಕೇಳಿ ಅವರಿಗೆ ಆಶ್ಚರ್ಯವಾಯಿತು. ಬಹುಶಃ ಆ ತಾಯಿಗೆ ಮಗಳ ಮನಸ್ಸು ಅರ್ಥವಾಗಿತ್ತು. ಸ್ವಲ್ಪವೇ ಹೊತ್ತು ಆ ತಾಯಿಯ ಪ್ರಯತ್ನ ಪರಿಸ್ಥಿತಿಯನ್ನು ಬದಲಿಸತೊಡಗಿತು. ಅವರೆಲ್ಲರ ನಡುವಿನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಭಾವೇಶ್ ಅವರಿಗೆ ಅದು ಹೇಗೋ ನೀತಾ ಮತ್ತು ತಮ್ಮ ನಡುವಿನ ಅಂತರ ಕೊಂಚವಾದರೂ ಕಡಿಮೆ ಆಗುತ್ತಿರುವುದನ್ನು 'ಕಂಡು' ಅಚ್ಚರಿಯೂ ಆಗತೊಡಗಿತು. ಅವರ ಕಿವಿಯಲ್ಲಿ ಆಗಲೇ ಮದುವೆಯ ಶಹನಾಯಿಯ ಸದ್ದೂ ಕೇಳಿಸತೊಡಗಿತ್ತು!

ಎಲ್ಲರನ್ನೂ ಒಡಂಬಡಿಸುವುದು ಸುಲಭದ ಪ್ರಯತ್ನವಾಗಿರಲಿಲ್ಲ. ಆದರೂ ನೀತಾರ ದೃಢ ನಿರ್ಧಾರದ ಎದುರು ಪರಿಸ್ಥಿತಿಯೇ ತಲೆಬಾಗಬೇಕಾಯಿತು. ಕಡೆಗೂ ನೀತಾ ಮತ್ತು ಭಾವೇಶರ ನಿಶ್ಚಿತಾರ್ಥವಾಯಿತು.

ಆದರೆ 'ಚಟ್ ಮಂಗನಿ ಪಟ್ ಬ್ಯಾಹ್' ಎಂಬಂತೆ ನಿಶ್ಚಿತಾರ್ಥ ಆದೊಡನೆ ಮದುವೆಯ ದಿನ ಬರಲಿಲ್ಲ. ಈ ಎರಡೂ ಗುಜರಾತಿ ಪರಿವಾರಗಳ ನಡುವೆ ಬಹಳ ಅಂತರವಿತ್ತು, ದೊಡ್ಡ ಕಂದರವೇ ಬಾಯ್ತೆರೆದಿತ್ತು. ಮದುವೆಗೆ ಎಂಟು ತಿಂಗಳ ನಂತರದ ದಿನಾಂಕವನ್ನು ಹುಡುಕಿಟ್ಟರು. ನೀತಾ ಅವರ ಮನೆಯವರಿಗೆ ಇನ್ನೂ ಆಸೆಯಿತ್ತು. ಈ ದೀರ್ಘ ಎಂಟು ತಿಂಗಳುಗಳಲ್ಲಿ ಹುಡುಗಿಯ ತಲೆಗೇರಿದ ಸಮಾಜಸೇವೆಯ ಭೂತ ಇಳಿದುಹೋಗುವುದೆಂದು ಭಾವಿಸಿದ್ದರು. ಇವರಿಬ್ಬರನ್ನೂ ಅಗಲಿಸಿ ಇಡುವಲ್ಲಿ ತಾವು ಸಫಲರಾಗುವೆವು ಎಂಬ ಆಶಾವಾದ. ಭಾವೇಶ್ ಅವರ ಮೆದುಳಲ್ಲಿ ಈ ಬಗೆಯ ಅದೆಷ್ಟೋ ಶಂಕೆಗಳು ಉದ್ಭವಿಸಿದ್ದು ನಿಜ. ಆದರೆ ಈಗ ಭಾವೇಶ್ ಅವರಿಗೆ ತಮಗಿಂತ ಹೆಚ್ಚು ನೀತಾ ಅವರ ಮೇಲೆ ಭರವಸೆ ಮೂಡಿತ್ತು.

ನಿಶ್ಚಿತಾರ್ಥದ ನಂತರ ಭಾವೇಶ್ ಅವರಲ್ಲಿ ಏನಾದರೂ ಪರಿವರ್ತನೆ ಆಯಿತೋ ಇಲ್ಲವೋ ಅವರಿಗೂ ತಿಳಿಯದು. ಆದರೆ ಇಷ್ಟಂತೂ ಖಂಡಿತಾ ಆಗಿತ್ತು; ಮೊದಲೆಲ್ಲ ಮೋಂಬತ್ತಿಗೆ ಬೇಕಾದ ಕಚ್ಚಾ ಮಾಲು ಸಾಕಷ್ಟು ದಿನಗಳು ಬರುತ್ತಿತ್ತು, ತಿಂಗಳವರೆಗೂ ಸಾಕಾಗುತ್ತಿತ್ತು. ಈಗ ನೋಡಿದರೆ, ವಾರ ವಾರಕ್ಕೂ ಮುಗಿದುಬಿಡುವುದು. ಮದುವೆಗೆ ಹಣ ಕೂಡಿಸಲೆಂದು ಭಾವೇಶ್ ಹೆಚ್ಚು ಶ್ರಮಪಡುತ್ತಿದ್ದರು ಎಂದಲ್ಲ. ತಮ್ಮ ಎಲ್ಲಾ ಗೆಳೆಯರಲ್ಲಿ 'ಕಚ್ಚಾ ಪದಾರ್ಥಗಳು ಮುಗಿದುಬಿಟ್ಟಿವೆ' ಎಂದು ಹೇಳಿ ಮುಂಬಯಿಗೆ ಹೊರಡುತ್ತಿದ್ದರು. ಪ್ರತಿ ವಾರ, ಇಲ್ಲವೇ ಹತ್ತು ದಿನಕ್ಕೆ ಮುಂಬಯಿಗೆ ಹೋಗಿ ನೀತಾ ಅವರನ್ನು ಭೆಟ್ಟಿ ಮಾಡುವರು. ಬದುಕು ತಮ್ಮೆದುರು ತೆರೆದ ಪ್ರೀತಿಯ ಮಹಾದ್ವಾರ ಮುಚ್ಚದಿರಲೆಂಬ ಕಾತುರ. ಅಷ್ಟೆಲ್ಲ ಭರವಸೆಯ ನಡುವೆಯೂ ಒಳಗೊಳಗೇ ಭುಗಿಲೆದ್ದ ಭೀತಿ. ಎಲ್ಲಾದರೂ ನೀತಾ ತಮ್ಮ ನಿರ್ಧಾರವನ್ನು ಬದಲಿಸಿಬಿಟ್ಟರೆ ಎಂಬ ಆತಂಕ. ಭರವಸೆ, ಭೀತಿಗಳ ನಡುವೆ ಮನಸ್ಸು ಜೋಕಾಲಿ.

ಭಾವೇಶ್ ಅತಿ ಕಡಿಮೆ ಖರ್ಚಿನಲ್ಲಿ ಮುಂಬಯಿಗೆ ಹೋಗುತ್ತಿದ್ದರು. 'ಮಹಾರಾಷ್ಟ್ರ ರಾಜ್ಯ ಪರಿವಹನ್ ನಿಗಮ'ದ ಕೆಂಪು ಬಸ್ಸಿನಲ್ಲಿ ಎಷ್ಟೇ ಅನನುಕೂಲವಿದ್ದರೂ ಹೋಗುವರು. ಉಳಿಸಿದ ಹಣದಲ್ಲಿ ನೀತಾಗೆ ಏನಾದರೂ ಉಡುಗೊರೆ ಕೊಂಡೊಯ್ಯಬಯಸುವರು. ಆ ದಿನಗಳಲ್ಲಿ ಮಹಾಬಲೇಶ್ವರದಿಂದ ಮುಂಬಯಿ ತಲುಪಲು ಎಂಟರಿಂದ ಹತ್ತು ಗಂಟೆಗಳು ಹಿಡಿಯುತ್ತಿದ್ದವು. ಆ ಪಯಣದ ಉದ್ದಕ್ಕೂ ಭಾವೇಶ್ ಅವರ ಎದೆಯ ಬಡಿತ ಹೇಳುತ್ತಿತ್ತು:

ರಾಸ್ತೆ ಭರ್ ರೋ ರೋಕರ್ ಪೂಛಾ  
ಹಮ್ಸೆ ಪೈರ್ ಕೆ ಛಾಲೋ ನೆ  
ಅರೆ, ಬಸ್ತೀ ಇತನೀ ದೂರ್ ಕ್ಯೋ ಬಸಾ ಲೀ  
ದಿಲ್ ಮೆ ಬಸನೆ ವಾಲೋ ನೆ  
(ಹಾದಿಯ ಉದ್ದಕ್ಕೂ ಕೇಳಿದವು  
ನನ್ನ ಪಾದಗಳಲ್ಲಿ ಬಿರಿದ ಬೊಬ್ಬೆಗಳು  
ಇಷ್ಟು ದೂರ ಏಕೆ ಮನೆ ಮಾಡಿದಳು  
ಹೃದಯದಲ್ಲಿ ವಾಸಿಸುವವಳು?)

ಮುಂಬಯಿ ತಲುಪುವ ಮೊದಲು ಬಸ್ಸಿನಲ್ಲಿ ಕುಳಿತು ಈ ಬಾರಿ ನೀತಾಗೆ ಏನು ಉಡುಗೊರೆ ಕೊಂಡೊಯ್ಯಲಿ ಎಂದು ಯೋಚಿಸುತ್ತಿದ್ದರು. ಕೊನೆಗೆ ಗುಲಾಬಿಯ ಗೊಂಚಲು ಹಿಡಿದುಹೋದರೆ ಹೇಗೆ ಎಂದು ಯೋಚಿಸುವರು. ಮತ್ತೆ ಅನಿಸುತ್ತಿತ್ತು, ಗುಲಾಬಿಯಂತಹ ಹುಡುಗಿಗೆ ಗುಲಾಬಿಯ